4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ. ನಂಃ 10023/2018**

ಚಾಸಾ ಃ 09

ಪ್ರಾಸಾ ಃ 10

| | | |
|---|---|---|
| ಹೆಸರು | ಃ | ಚಂದ್ರಶೇಖರ್ |
| ತಂದೆಯ ಹೆಸರು | ಃ | ರಮೇಶ್ |
| ವಯಸ್ಸು | ಃ | 24 ವರ್ಷ |
| ವೃತ್ತಿ | ಃ | ಆಟೋ ಚಾಲಕ |
| ವಾಸ | ಃ | ಡಿ ಕ್ರಾಸ್, ದೊಡ್ಡಬಳ್ಳಾಪುರ |

**ಈ ದಿನ ದಿನಾಂಕಃ 03.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಈಗ ನೋಡಿದ ಅಮಾನತ್ತು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-11 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-11ಎ ಎಂದು ಗುರುತಿಸಲಾಯಿತು. ಸುಮಾರು 4 ವರ್ಷಗಳ ಹಿಂದೆ ಪೋಲೀಸು ಠಾಣೆಯಲ್ಲಿ ಆ ಸಹಿಯನ್ನು ಮಾಡಿದ್ದೆ. ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈಗ ನನಗೆ ತೋರಿಸಿದ ಮು.ಮಾ 1 ಮತ್ತು 2 ವಸ್ತುಗಳನ್ನು ಆ ದಿನ ನಾನು ನೋಡಿರಲಿಲ್ಲ. ಸಹಿ ಮಾಡಿದ ದಿನ ಪೋಲೀಸರು ನನಗೆ ಆ ವಸ್ತುಗಳನ್ನು ತೋರಿಸಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ**

2. ದಿಃ 22.11.2016 ರಂದು ಮದ್ಯಾಹ್ನ 12.30 ಗಂಟೆಗೆ ರೈಲ್ವೆ ನಿಲ್ದಾಣದ ಬಳಿ ಇರುವ ರೈಲ್ವೇ ಸೇತುವೆ ಬಳಿ ಇರುವ ಕಾಡು ಜಾತಿ ಮರದ ಬಳಿ ಈ ಕೇಸಿನ 1ನೇ ಆರೋಪಿ

ಕೃತ್ಯಕ್ಕೆ ಬಳಸಿದ ಮು.ಮಾ 1 ಹಾಗೂ 2 ಗಳನ್ನು ತೆಗೆದು ಹಾಜರು ಪಡಿಸಿದ್ದು ಸದರಿ ವಸ್ತುಗಳನ್ನು ಪೋಲೀಸರು ಬಿಳಿ ಚೀಲದಲ್ಲಿ ಹಾಕಿ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಾಗ ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನಿಪಿ-11ಎ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ**

ಇಲ್ಲ.

**ಮರು ವಿಚಾರಣೆ ಃ**

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ